# ಸಂಗಾತಿಯ ನೆನಪುಗಳ ಹಾದಿಯಲ್ಲಿ ಪಾದಯಾತ್ರೆ

ಒಂದು ವಿಶೇಷ ಟೆಲಿಫೋನ್ ಕರೆ...

ನನಗೆ ಆ ಫೋನ್ ಏಪ್ರಿಲ್ ತಿಂಗಳ ಮಧ್ಯದಲ್ಲಿ ಒಂದು ಶನಿವಾರ ಬೆಳಗ್ಗೆ ಬಂತು. ಬೆಳಗ್ಗೆಯಿಂದಲೇ ಆ ದಿನ ಸ್ವಲ್ಪ ಭಿನ್ನವಾಗಿತ್ತು. ಶನಿವಾರ ಅಂದರೆ ವೀಕೆಂಡ್ ಆಗಿದ್ದಾಗ್ಯೂ ನಾನು ಬೇಗನೆ ಎದ್ದೆ. ಏಳುತ್ತಲೇ ನನ್ನ ಮನೆಯನ್ನು ಸ್ವಚ್ಛಗೊಳಿಸಿದೆ. ಲೂಸಿ ಬರುವವಳಿದ್ದಳು, ಅವಳು ಬರುವುದಕ್ಕೂ ಮೊದಲೇ ಮನೆ ಸ್ವಚ್ಛವಾಗಬೇಕೆಂದು ಬಯಸುತ್ತಿದ್ದೆ.

ಸ್ವಚ್ಛವಾದ ಮನೆಯನ್ನು ಕೆಲವು ಕ್ಷಣ ಮಂತ್ರಮುಗ್ಧನಾಗಿ ನೋಡುತ್ತಿದ್ದೆ. ನನ್ನ ಮನೆಯ ಎರಡು ಕೋಣೆಗಳು ನನ್ನ ಬೀಡಾಡಿ ಬದುಕಿಗೆ ಸಾಕ್ಷಿಯಾಗಿವೆ. ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆ ವ್ಯಕ್ತಿಗಳ ದಾನ ಅಥವಾ ಸಾಲದಲ್ಲಿ ಕೊಂಡ ಫರ್ನಿಚರ್‌ಗಳು ಅಲ್ಲಲ್ಲಿ ಚದುರಿ ಬಿದ್ದು ಒಂದು ಅಸಂಬದ್ಧತೆಯನ್ನು ಮೂಡಿಸುತ್ತವೆ; ಅಂತೆಯೇ ನನ್ನ ಜೀವನದೊಂದಿಗೆ ಕಲೆತ ಪಾತ್ರಗಳಲ್ಲಿ ಪರಸ್ಪರ ಯಾವ ಸಂಬಂಧವೂ ಕೂಡುವುದಿಲ್ಲ. ಸೋಫಾ ಕಮ್ ಬೆಡ್ ಮಾಜಿ ಹೆಂಡತಿ ನೀನಾಳಿಂದ ಲಭ್ಯವಾಯಿತು, ಅದರ ಮೇಲೆ ಹಾಸಿದ ಕೆಂಪು ರಗ್ಗನ್ನು ನನ್ನ ತಾಯಿ ಕೊಟ್ಟಿದ್ದಾಳೆ. ನನ್ನ ಸ್ನೇಹಿತನೊಬ್ಬ ತಾನು ಹೊಸ ಮನೆಗೆ ಹೊಸ ಫರ್ನಿಚರ್ ಮಾಡಿಸುವುದಾಗಿ ಹೇಳಿ ಒಂದು ಮಂಚವನ್ನು ಕೊಟ್ಟು ಹೋಗಿದ್ದ. ಗೋಡೆಗೆ ನೇತು ಹಾಕಿರುವ ಪೇಂಟಿಂಗ್ಸ್ ಅನ್ನು ನನ್ನ ಸಹೋದರಿ ಜೂಲಿಯಾ ಕಳೆದ ವರ್ಷ ಕ್ರಿಸ್‌ಮಸ್ ವೇಳೆಯಲ್ಲಿ ಉಡುಗೊರೆಯಾಗಿ ಕೊಟ್ಟಿದ್ದಳು. ಲಿವಿಂಗ್ ರೂಮಿನ ಮೂಲೆಯಲ್ಲಿರುವ ಆರಾಮ ಕುರ್ಚಿಯನ್ನು ನನ್ನ ಜರ್ಮನ್ ಮನೆಯೊಡತಿ ಕೊಟ್ಟಿದ್ದಾಳೆ; ನಾನು ಇದೇ ಕುರ್ಚಿಯಲ್ಲಿ ಕೂತು ಮೆಡಿಟೇಶನ್ ಮಾಡುತ್ತೇನೆ. ಅವಳು ಗಂಭೀರವಾಗಿ, 'ಇದು ಜರ್ಮನ್ ಮೇಡ್ ಚೇರ್, ತುಂಬಾ ಮಜಬೂತಾಗಿದೆ, ನೀವು ಈ ಮನೆಯಲ್ಲಿ ಬಾಡಿಗೆ ಇರೋವರೆಗೂ ಇದನ್ನು ಉಪಯೋಗಿಸಿ' ಎಂದಿದ್ದಳು.

ಪುಸ್ತಕಗಳ ರ‍್ಯಾಕನ್ನು ಹಿಂದಿನ ಬಾಡಿಗೆಯವನು ಬಿಟ್ಟು ಹೋಗಿದ್ದ. ಕಿಚನ್‌ನಲ್ಲಿ ಹಾಕಿರುವ ಚಿಕ್ಕ ಗೋಳಾಕಾರದ ಮೇಜನ್ನು ಲೂಸಿ ಆನ್‌ಲೈನಿನಲ್ಲಿ ಖರೀದಿಸಿ ಕೊಟ್ಟಿದ್ದಾಳೆ. ತನ್ನ ತಂದೆ ಕಿಚನ್ ಸ್ಲಾಬ್‌ನಲ್ಲಿ ನಿಂತು ಅಡುಗೆ ಮಾಡುವುದನ್ನು ಅವಳಿಂದ ನೋಡಲಾಗಿರಲಿಲ್ಲ. ಆದರೆ... ಬುಕ್ ರ‍್ಯಾಕಿನ ಮೇಲಿರುವ ನನ್ನಿಬ್ಬರು ಹೆಣ್ಣುಮಕ್ಕಳ ಮುಗುಳ್ನಗುತ್ತಿರುವ ಫೋಟೊವನ್ನು ನಾನೇ ಹೊಡೆದು ಫ್ರೇಮಿಗೆ ಹಾಕಿದ್ದೇನೆ. ಹೀಗಾಗಿ ಇದು ನನಗೆ ನನ್ನ ಮನೆಯ ಎಲ್ಲಾ ವಸ್ತುಗಳಿಗಿಂತ ಹೆಚ್ಚು ಪ್ರಿಯವಾಗಿದೆ. ಸರಿ, ಮನೆ ಎಂದರೆ ಫರ್ನಿಚರ್ಸ್ ವಿವರಣೆ ಹೇಳುವುದಷ್ಟೇ ಅಲ್ಲ. ಈಗ ನನಗೂ ನನ್ನದೇ ಆದ ಒಂದು ಮನೆಯಿದೆ ಎಂಬುದು ಸಂತಸದ ವಿಷಯ. ಇಲ್ಲಿಗೆ ಐದು ತಿಂಗಳ ಹಿಂದೆಯಷ್ಟೇ ಶಿಫ್ಟ್ ಆಗಿದ್ದೇನೆ. ವಾಯಲೆ ಸರೋವರದ ತೀರದಲ್ಲಿ, ವಾಯಲೋಸೋಪಾರ್ಕನ್ ಗಾರ್ಡನ್‌ನಲ್ಲಿರುವ ಈ ವಾಸದ ಕಟ್ಟಡ ಜರ್ಮನಿಯವರಿಂದ ನಿರ್ಮಿತವಾಗಿದೆ. ಹೀಗಾಗಿ ಇಲ್ಲಿ ಬಹುತೇಕ ನೇಮ್ ಪ್ಲೇಟ್‌ಗಳ ಮೇಲೆ ಜರ್ಮನ್ ಅಡ್ಡ ಹೆಸರಿದೆ. ಜರ್ಮನ್ ಮೇಡ್ ಕುರ್ಚಿಯಂತೆ ಈ ಜರ್ಮನ್ ಮೇಡ್ ಕಟ್ಟಡ ಸಹ ಮಜಬೂತಾಗಿದೆ. ಮನೆ ಬಾಡಿಗೆ ನನಗೆ ಜಾಸ್ತಿಯಾಗಿದೆ. ಆದರೆ ಒಂದು ಅನುಕೂಲಕರ ಸ್ಥಳದಲ್ಲಿ, ಒಂದು ಯೋಗ್ಯ ನಿವಾಸ, ಜೀವನವನ್ನು ಸಾಕಷ್ಟು ವ್ಯವಸ್ಥಿತಗೊಳಿಸುತ್ತದೆ. ಮುಖ್ಯ ವಿಷಯವೆಂದರೆ, ಲೂಸಿ ಮತ್ತು ಗ್ರೇಸಿ ನನ್ನ ಮನೆಗೆ ಬಂದಾಗ ಅವರಿಗಾಗಿ ಒಂದು ಕೊಠಡಿಯಿದೆ. ಮನೆ, ಪರಿವಾರದ ಒಂದು ಸಂಸ್ಥೆಯಾಗಿದ್ದು, ಪರಿವಾರವಿಲ್ಲದೆ ಮನೆಯಿಲ್ಲ. ನಾನು ನನ್ನ ಮನೆಯನ್ನು ಸ್ವಚ್ಛ ಮಾಡುವಾಗ, ಈ ಮಂದಿರವನ್ನು ಪ್ರೀತಿಯಿಂದ ನೋಡುತ್ತೇನೆ. ಸ್ವಚ್ಛವಾಗಿರುವ ಮನೆ ಅದೆಷ್ಟು ಹಿತವೆನಿಸುತ್ತದೆ! ಆಗ ಸುಖಕರ ಮತ್ತು ಸಕಾರಾತ್ಮಕ ಅನುಭವವಾಗುತ್ತದೆ.

ಮೈ ಸ್ವೀಟ್ ಹೋಮ್! ಐ ಲಿವ್ ಹಿಯರ್ ಎಲೋನ್! ನಾನು ಮನಸ್ಸಿನಲ್ಲಿ ಗುನುಗುನಿಸುತ್ತಾ ಬಾತ್‌ರೂಮಿಗೆ ಹೋದೆ. ಬಿಸಿ ನೀರನ್ನು ನನ್ನ ಮೇಲೆ ಬಿಟ್ಟುಕೊಂಡೆ. ನಮ್ಮದೇ ಆದ ಸ್ನಾನದ ಮನೆಯನ್ನು ಹೊಂದುವುದು ಸುಖದಾಯಕವಾಗುತ್ತದೆ; ಹೊರಗೆ ಹೋಗುವ ಅವಸರವಿರುವುದಿಲ್ಲ. ಮೊದಲಿದ್ದ ಮನೆಯಲ್ಲಿ... ಓಹೋ! ಆರು ಜನರಿಗೆ ಒಂದು ಬಾತ್‌ರೂಮ್! ನಾನು ಅದೆಷ್ಟೋ ಬಾರಿ ಸ್ನಾನದ ನಡುವೆಯೇ ಒದ್ದೆ ಶರೀರವನ್ನು ಟವಲ್‌ನಿಂದ ಒರೆಸಿಕೊಂಡು ಹೊರ ಬರಬೇಕಾಗುತ್ತಿತ್ತು, ಕೆಲವರಿಗೆ ಮಲ ವಿಸರ್ಜನೆಗೆ ತುರ್ತಾಗುತ್ತಿತ್ತು. ನಾನೂ ಅದೆಷ್ಟೋ ಬಾರಿ ಜನ ಸ್ನಾನ ಮಾಡುತ್ತಿರುವಾಗಲೇ, ಅವರನ್ನು ಹೊರಗೆಳೆದಿದ್ದೆ. ಅವಸರದ ಬದುಕಿನಲ್ಲಿ ಸಂಪೂರ್ಣ ಸ್ನಾನವೊಂದು ಆಯಾಸವನ್ನು ಪರಿಹರಿಸುತ್ತದೆ. ನಾನು ತುಂಬಾ ಹೊತ್ತು ಸ್ನಾನ ಮಾಡುತ್ತಿದ್ದೆ. ಎಸೆನ್ಸ್ ಆಯಲ್ ಸಹ ಉಪಯೋಗಿಸಿದೆ. ಸ್ನಾನ ಮಾಡಿದ ಹಿತವನ್ನು ಮನಗಂಡೆ, ಶರೀರದಿಂದ ಸುವಾಸನೆ ಸೂಸುತ್ತಿತ್ತು. ಒದ್ದೆಯಾದ ಟವಲನ್ನು ಹರವಿದೆ, ನಂತರ ನೇರವಾಗಿ ಕಿಚನ್‌ಗೆ ಹೋದೆ. ತುಂಬಾ ಗಮನವಿಟ್ಟು ವಿಶೇಷ ತಿಂಡಿಯೊಂದನ್ನು ಮಾಡಲಾರಂಭಿಸಿದೆ; ಅದು ಮಶ್ರೂಮ್, ಚಿಕನ್ ಮತ್ತು ಸಲಾಡಿನ ಎಲೆಗಳ ರ‍್ಯಾಪ್‌ನ ತಿಂಡಿಯಾಗಿತ್ತು. ನಾನು ನಿತ್ಯ ಬೆಳಿಗ್ಗೆ ಎದ್ದ ಕೂಡಲೇ ಶಾಲೆಗೆ ದೌಡಾಯಿಸುತ್ತೇನೆ. ಶಾಲೆಯ ಕ್ಯಾಂಟೀನ್‌ನಲ್ಲಿ ಏನಾದರೂ ಕೊಂಡು ತಿನ್ನುತ್ತೇನೆ. ಆದರೆ ಇಂದು ಕುರುಕಲು ತಿಂಡಿ ತಿನ್ನಲು ಮನಸ್ಸಾಗುತ್ತಿದೆ. ಹೀಗಾಗಿ ಇಂಟರ್ನೆಟ್ ನೋಡಿ 'ಮೆಕ್ಸಿಕನ್ ರ‍್ಯಾಪ್' ಎಂಬ ತಿಂಡಿಯನ್ನು ತಯಾರಿಸುತ್ತಿದ್ದೇನೆ. ನಿನ್ನೆ ಸಂಜೆ ಪೇಟೆಯಿಂದ ಈ ರ‍್ಯಾಪ್ ತಯಾರಿಸುವ ಪದಾರ್ಥಗಳನ್ನು ಕೊಂಡು ತಂದಿದ್ದೆ. ನಮ್ಮ ಬಳಿ ಎಲ್ಲಾ ಸಾಮಗ್ರಿಗಳಿದ್ದಾಗ ಇದನ್ನು ತಯಾರಿಸುವುದು ಕಷ್ಟವಲ್ಲ.

ಹೂಂ... ನಾನು ಚಪ್ಪರಿಸುತ್ತಾ ರ‍್ಯಾಪ್‌ನಿಂದ ಘಮಘಮಿಸುತ್ತಿದ್ದ ವಾಸನೆಯನ್ನು ಮೂಗಿನ ಹೊಳ್ಳೆಗಳೊಳಗೆ ತುಂಬಿಕೊಂಡು, ಮೇಜಿನ ಬಳಿ ತಿನ್ನಲು ಕೂತಿದ್ದೆ, ಆಗಲೇ ಮೊಬೈಲ್ ರಿಂಗಾಯಿತು. ನಾನು ನೆಮ್ಮದಿಯಿಂದ ಕೂತು ಮಜವಾಗಿ ತಿಂಡಿ ತಿನ್ನಲು ಬಯಸುತ್ತಿದ್ದೆ. ಈ ನಡುವೆ ನನ್ನ ಮತ್ತು

